ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 388/2022**

**ಫ್ರಾಸಾ-7 ಚಾಸಾ- 12**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾ. ಕರಿಯಪ್ಪ |
| ತಂದೆಯ ಹೆಸರುಃ | : | ಗವಿಯಪ್ಪ |
| ವಯಸ್ಸುಃ | : | 53ವರ್ಷ |
| ಉದ್ಯೋಗಃ | : | ವೈದ್ಯಾಧಿಕಾರಿಗಳು |
| ವಾಸ | : | ಅರಸೀಕೆರೆ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 30-05-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ಡಿಸೆಂಬರ್-2015 ರಿಂದ ಇಲ್ಲಿಯವರೆಗೆ ಅರಸೀಕೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17.12.2020ರಂದು ಸಂಜೆ 5.30ಗಂಟೆ ನಾನು ವೈದ್ಯಾಧಿಕಾರಿಯಾಗಿದ್ದಾಗ ಅರಸೀಕೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ವೃತ್ತ ನಿರೀಕ್ಷಕರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಮಂಜುನಾಥ ಎಂಬುವವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ವರದಿ ನೀಡುವಂತೆ ಮನವಿ ಮಾಡಿದ್ದರು. ಆ ಮನವಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಅದರಂತೆ ನಾನು ಸದರಿ ಬಾಲಕನನ್ನು ಪರೀಕ್ಷೆಗೇ ಒಳಪಡಿಸಿದೆನು. ಸದರಿ ಬಾಲಕನು ಸಂಭೋಗ ನಡೆಸಲು ಶಕ್ತನಿರುತ್ತಾನೆ ಮತ್ತು ಆತನು ಸಂಭೋಗ ನಡೆಸಿದ ವೇಳೆ ಆತನ ಮೈಮೇಲೆ ಗಾಯಾಳಗಿವೆಯೇ ಅದಕ್ಕೆ ಸಂಬಂಧಿಸಿದದಂತೆ ವಿವರಗಳನ್ನು ನೀಡುವಂತೆ ಮತ್ತು ಆತನ ವಯಸ್ಸಿನ ಬಗ್ಗೆ ವರದಿ ನೀಡುವಂತೆ ಕೇಳಿದ್ದರು. ನಾನು ಆತನನ್ನು ಪರೀಕ್ಷೆಗೆ ಒಳಪಡಿಸಿದಾಗ ಆತನ ಸಂಭೋಗ ನಡೆಸಲು ಶಕ್ತನಿರುತ್ತಾನೆ ಎನ್ನುವುದು ಕಂಡುಬಂತು ಮತ್ತು ಆತನ ಮೈಮೇಲೆ ಯಾವುದೇ

ಕುರುಹುಗಳು ಕಂಡುಬಂದಿಲ್ಲ ಮತ್ತು ಆತನ ವಯಸ್ಸು ಅಂದಾಜು 17ವರ್ಷ ಎಂದು ಅಭಿಪ್ರಾಯಪಟ್ಟಿರುತ್ತೇನೆ. ನಿಖರವಾದ ವಯಸ್ಸನ್ನು ರೆಡಿಯೋಲಾಜಿಸ್ಟ್ ತಜ್ಞರನ್ನು ಸಂಪರ್ಕಿಸುವಂತೆ ತಿಳಿಸಿರುತ್ತೇನೆ. ಈ ಎಲ್ಲಾ ವಿಚಾರವಾಗಿ ನನ್ನ ಅಭಿಪ್ರಾಯವನ್ನು ಅದರಲ್ಲಿ ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.16(1) ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ.16(1)(ಎ) ಎಂದು ಗುರುತಿಸಲಾಯಿತು.

3.ಪರೀಕ್ಷಾ ಸಮಯದಲ್ಲಿ ಆತನನ್ನು ವಿಚಾರಿಸಿದಾಗ ಆತನು ದಿಃ01.12.2020 ರಿಂದ 08.12.2020ರವರೆಗೆ 05 ಬಾರಿ ಸಂಭೋಗ ನಡೆಸಿರುವುದಾಗ ನಂತರ 17.12.20ರವರೆಗೆ 03 ಬಾರಿ ಸ್ನಾನ ಮಾಡಿರುವುದಾಗಿ ಮತ್ತ ಒಳಉಡುಪನ್ನು ಮೂರು ಸಲ ಬದಲಾಯಿಸಿರುವುದಾಗಿ ತಿಳಿಸಿದನು. ಯಾವುದೇ ತಾಜಾ ಕುರುಹುಗಳು ಕಂಡುಬಂದಿಲ್ಲ. ಆದ್ದರಿಂದ ಆತನ ಒಳಉಡುಪನ್ನು ಸಂಗ್ರಹಿಸಿಲ್ಲ. ಈ ವಿಚಾರನ್ನು ಕೂಡ ನಿಪಿ.16(1)ರಲ್ಲಿ ನಮೂದಿಸಿರುತ್ತೇನೆ. ಸದರಿ ಬಾಲಕನನ್ನು ನೋಡಿದರೆ ಗುರುತಿಸಿರುತ್ತೇನೆ. ಆ ಬಾಲಕ ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

4. ನಿಪಿ.16ರಲ್ಲಿ ಪೊಲೀಸರು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಅದೇ ರೀತಿಯಾಗಿ ನಾನು ಆತನಿಗೆ ಪ್ರಶ್ನೆಗಳನ್ನು ಕೇಳಿರುವುದು ಎಂದರೆ ಸಾಕ್ಷಿಯು ಆ ಪ್ರಶ್ನೆಗಳನ್ನು ಕೇಳಿರುತ್ತೇನೆ, ಆತನನ್ನು ಪರೀಕ್ಷೆ ಮಾಡಿರುತ್ತೇನೆ, ಆತನು ಹೇಳಿರುವುದನ್ನು ದಾಖಲಿಸಿಕೊಂಡಿರುತ್ತೇನೆ. ನಿಪಿ.16(1)ರಲ್ಲಿ ಕ.ಸಂ.3ರಲ್ಲಿ ದಿನಾಂಕವನ್ನು ತಿದ್ದಿರುತ್ತೇನೆ ಎಂದರೆ ಸರಿಯಲ್ಲ. ದಿಃ01.12.2020ರಲ್ಲಿ 2ನ್ನು ತಿದ್ದಿರುತ್ತೇನೆ ಎಂದರೆ ಸರಿಯಲ್ಲ. ನಾನೂ ಬಾಲಕನನ್ನು ಪರೀಕ್ಷೆ ಮಾಡಿಲ್ಲ ಮತ್ತು ಪೊಲೀಸರು ಹೇಳಿದಂತೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.ನಾನು ಬಾಲಕನನ್ನು ಪರೀಕ್ಷೆ ಮಾಡಿದ್ದೇ ಆದಲ್ಲಿ ನ್ಯಾಯಾಲಯದಲ್ಲಿ ಕೂಡಲೇ ಗುರುತು ಹಿಡಿಯುತ್ತಿದ್ದೇನು. ಆದ್ದರಿಂದಲೇ ನಾನು ಆತನನ್ನು ಗುರುತು ಹಿಡಿಯಲು ಆ ಕಡೆ ಈ ಕಡೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಬಾಲಕನನ್ನು ನನ್ನ ಮುಂದೆ ಪರೀಕ್ಷೆಗಾಗಿ ಕರೆದುಕೊಂಡು ಬಂದಿಲ್ಲ ಮತ್ತು ಆತನನ್ನು ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ವರದಿ

ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**